UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail: librarian@uasbangalore.edu.in
Monday
31-08-2026

ಮೆಕ್ಕೆಜೋಳಕ್ಕೆ ಕ್ರಾಪ್ ಹಾಲಿಡೇ



■ ಅವಿನಾಶ್ ಜೈನಹಳ್ಳಿ ಮೈಸೂರು

ಮೆಕ್ಕೆಜೋಳ ಬೆಳೆಗೆ ವರ್ಷದಿಂದ ವರ್ಷಕ್ಕೆ ವ್ಯಾಪಿಸುತ್ತಿರುವ ಡೌನಿ ಮಿಲ್ಡ್ಯೂ ರೋಗಕ್ಕೆ ಕಡಿವಾಣ ಹಾಕಲು ಕೃಷಿ ಇಲಾಖೆ ಮಹತ್ವದ ಕ್ರಮಕ್ಕೆ ಮುಂದಾಗಿದೆ. ಮುಂದಿನ ಒಂದರಿಂದ ಎರಡು ವರ್ಷ ಮೆಕ್ಕೆಜೋಳ ಬೆಳೆಯುವುದನ್ನು ಸ್ಥಗಿತಗೊಳಿಸಿ 'ಕ್ರಾಪ್ ಹಾಲಿಡೇ' ಜಾರಿಗೊಳಿಸುವಂತೆ ಶಿಫಾರಸು ಮಾಡಿದೆ.

ಕಳೆದ ವರ್ಷ 5 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದ ಡೌನಿ ಮಿಲ್ಡ್ಯೂ (ಸಸ್ಯಗಳಲ್ಲಿ ಕಂಡುಬರುವ ಅತ್ಯಂತ ಹಾನಿಕಾರಕ ಶಿಲೀಂಧ್ರ), ಪ್ರಸಕ್ತ ವರ್ಷ 8 ರಿಂದ 10 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶಕ್ಕೆ ವ್ಯಾಪಿಸಿರುವುದು ಇಲಾಖೆಯ ಆತಂಕ ಹೆಚ್ಚಿಸಿದೆ. ಇದೇ ಪ್ರಮಾಣದಲ್ಲಿ ಮೆಕ್ಕೆಜೋಳ ಬೆಳೆಯುವುದನ್ನು ಮುಂದುವರಿಸಿದರೆ ಮುಂದಿನ ವರ್ಷ ರೋಗಬಾಧೆ ಇನ್ನಷ್ಟು ವಿಸ್ತರಿಸುವ ಸಾಧ್ಯತೆ ಇದೆ ಎಂದು ಇಲಾಖೆ ಎಚ್ಚರಿಸಿದೆ. ರೋಗ ನಿಯಂತ್ರಣಕ್ಕೆ ಔಷಧ ಸಿಂಪಡಣೆ ಮಾತ್ರ ಸಾಕಾಗುವುದಿಲ್ಲ. ರೋಗದ ಮೂಲವನ್ನೇ ನಿಯಂತ್ರಿಸುವ ನಿಟ್ಟಿನಲ್ಲಿ ಬೆಳೆ ಪರಿವರ್ತನೆ ಅನಿವಾರ್ಯ ಎಂಬುದು ಇಲಾಖೆ ನಿಲುವು. ಹಾಗಾಗಿ, ಈ ಕುರಿತು ಕೃಷಿ ಜಂಟಿ ನಿರ್ದೇಶಕ ಕೆ.ಎಚ್. ರವಿ 'ಕ್ರಾಪ್ ಹಾಲಿಡೇ' ಜಾರಿಗೊಳಿಸುವಂತೆ ಕೃಷಿ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ರೋಗಕ್ಕೆ ಕಾರಣವಾಗುವ ರೋಗಕಾರಕ ಮಣ್ಣಿನಲ್ಲಿ ಉಳಿಯುವ ಸಾಧ್ಯತೆ ಇದ್ದು, ಗಾಳಿಯ ಮೂಲಕವೂ ಹರಡಬಹುದು. ಹೀಗಾಗಿ ಒಂದೇ ಜಮೀನಿನಲ್ಲಿ ನಿರಂತರವಾಗಿ ಮೆಕ್ಕೆಜೋಳ ಬೆಳೆಯುವುದರಿಂದ ರೋಗದ ಚಕ್ರ ಮುಂದುವರಿಯುವ ಸಾಧ್ಯತೆ ಇದೆ. ಒಂದು ಹಂಗಾಮಿನಲ್ಲಿ ರೋಗ ಕಡಿಮೆಯಾದರೂ ಮುಂದಿನ ಹಂಗಾಮಿನಲ್ಲಿ ಮತ್ತೆ ಕಾಣಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಕನಿಷ್ಠ ಒಂದು ವರ್ಷ ಅಥವಾ ಎರಡು ಹಂಗಾಮುಗಳ ಕಾಲ ವಿರಾಮ ಪಡೆಯುವುದು ಅಗತ್ಯ. ಈ ಅವಧಿಯಲ್ಲಿ ರೈತರು ರಾಗಿ, ತೊಗರಿ, ಉದ್ದು ಸೇರಿ ಸ್ಥಳೀಯ ಬೆಳೆಗಳತ್ತ ಮುಖ ಮಾಡುವಂತೆ ಪ್ರೋತ್ಸಾಹಿಸಲಾಗುತ್ತದೆ ಎನ್ನುತ್ತಾರೆ ಕೆ.ಎಚ್.ರವಿ.

ಹೆಚ್ಚುತ್ತಿರುವ ಡೌನಿ ಮಿಲ್ಡ್ಯೂ ರೋಗ ತಡೆಗೆ ಕ್ರಮ

ಬಿತ್ತನೆ ಬೀಜ ವಿತರಣೆ, ಮಾರಾಟಕ್ಕೆ ಕಡಿವಾಣ: ರೈತರಿಗೆ ಮೆಕ್ಕೆಜೋಳ ಬೆಳೆಯದಂತೆ ಸೂಚಿಸಿ, ಮತ್ತೊಂದೆಡೆ ರೈತ ಸಂಪರ್ಕ ಕೇಂದ್ರಗಳ ಮೂಲಕ ಮೆಕ್ಕೆಜೋಳ ಬಿತ್ತನೆ ಬೀಜ ವಿತರಿಸಿದರೆ ಕ್ರಾಪ್ ಹಾಲಿಡೇ ಉದ್ದೇಶವೇ ವಿಫಲವಾಗಲಿದೆ. ಹೀಗಾಗಿ ರೈತ ಸಂಪರ್ಕ ಕೇಂದ್ರಗಳಲ್ಲಿ ಮೆಕ್ಕೆಜೋಳ ಬೀಜ ವಿತರಣೆ ಹಾಗೂ ಮಾರಾಟಕ್ಕೆ ಕಡಿವಾಣ ಹಾಕಬೇಕು. ಖಾಸಗಿ ಮಾರಾಟಗಾರರ ಮೂಲಕವೂ ಬೀಜ ಲಭ್ಯವಾಗದಂತೆ ಸರ್ಕಾರ ನೀತಿ ರೂಪಿಸಬೇಕು ಎಂಬ ಶಿಫಾರಸು ಮಾಡಲಾಗಿದೆ.

ಹಾಸನದಲ್ಲಿ ಹೆಚ್ಚು

ನಂಜನಗೂಡು, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕುಗಳಲ್ಲಿ ರೋಗ ಬಾಧೆ ಕಂಡುಬಂದಿದೆ. ಹಾಸನ ಜಿಲ್ಲೆಯಲ್ಲೂ ರೋಗ ಬಾಧೆ ಹೆಚ್ಚಾಗಿದೆ. ಇನ್ನು ಚಾಮರಾಜನಗರ ಸೇರಿ ಗಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲೂ ರೋಗದ ಲಕ್ಷಣಗಳು ಕಾಣಿಸಿಕೊಂಡಿವೆ. ಹೀಗಾಗಿ ಒಂದು ಜಿಲ್ಲೆಯ ವ್ಯಾಪ್ತಿಯಲ್ಲಿ ಮಾತ್ರ ಕ್ರಮ ಕೈಗೊಂಡರೆ ಸಾಕಾಗುವುದಿಲ್ಲ. ಗಡಿ ಪ್ರದೇಶಗಳಲ್ಲೂ ಸಮನ್ವಯದೊಂದಿಗೆ ಬೆಳೆ ಪರಿವರ್ತನೆ ಮಾಡಬೇಕಾದ ಅಗತ್ಯವಿದೆ. ಡೌನಿ ಮಿಲ್ಡ್ಯೂ, ಜತೆಗೆ ಮೆಕ್ಕೆಜೋಳಕ್ಕೆ ಎಲೆ ಅಂಗಮಾರಿ ರೋಗ ಹಾಗೂ ಫಾಲ್ ಆರ್ಮಿವರ್ಮ್ ಕೀಟಬಾಧೆಯೂ ಸವಾಲಾಗಿದೆ.

ಪರ್ಯಾಯ ಬೆಳೆಗೆ ಬೇಕು ಮಾರುಕಟ್ಟೆ

ಕ್ರಾಪ್ ಹಾಲಿಡೇ ಜಾರಿಗೊಳಿಸುವ ವೇಳೇ ರೈತರ ಮುಂದಿರುವ ಮತ್ತೊಂದು ಪ್ರಮುಖ ಪ್ರಶ್ನೆ ಪರ್ಯಾಯ ಬೆಳೆಗೆ ಮಾರುಕಟ್ಟೆ ಮತ್ತು ಬೆಂಬಲ ಬೆಲೆ. ಪರ್ಯಾಯ ಬೆಳೆಗಳಿಗೆ ಗುಣಮಟ್ಟದ ಬೀಜ, ತಾಂತ್ರಿಕ ಮಾರ್ಗದರ್ಶನ, ಮಾರುಕಟ್ಟೆ ವ್ಯವಸ್ಥೆ, ಸೂಕ್ತ ಬೆಲೆ ದೊರೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎನ್ನುವುದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರ ಒತ್ತಾಯ.



ಮೆಕ್ಕೆಜೋಳ ಬೆಳೆಗೆ 'ಕ್ರಾಪ್ ಹಾಲಿಡೇ' ಜಾರಿ ಮಾಡುವ ಮೊದಲು ರೈತರ ಜತೆ ಕೃಷಿ ಇಲಾಖೆ ಚರ್ಚೆ ಮಾಡಬೇಕು. ರೈತರು ಒಪ್ಪಿದರೆ ಮಾತ್ರ ಕ್ರಾಪ್ ಹಾಲಿಡೇ ಜಾರಿ ಮಾಡಬೇಕು. ಮೆಕ್ಕೆಜೋಳ ಬೆಳೆಯುವ ರೈತರಿಗೆ ಪರ್ಯಾಯ ಬೆಳೆಗಳ ಬಗ್ಗೆ ಅರಿವು ಮೂಡಿಸಬೇಕು. ಜತೆಗೆ ಪರಿಹಾರ ಘೋಷಣೆ ಮಾಡಬೇಕು.

| ಬಡಗಲಪುರ ನಾಗೇಂದ್ರ ಅಧ್ಯಕ್ಷ, ರಾಜ್ಯ ರೈತ ಸಂಘ

Vijayavani pg 03 & 5

ವಿ ರೈತ ಮಿತ್ರ



ಮಳೆಗಾಲದಲ್ಲಿ ಆದಷ್ಟೂ ನೀರಿನ ಸಂಗ್ರಹಣೆ ಮತ್ತು ಇಂಗಿಸುವಿಕೆ ಹೇಗೆ?

| ಶಿವಶಂಕರಪ್ಪ ಹಾಸನ

ಮಳೆನೀರು ವ್ಯರ್ಥವಾಗಿ ಹರಿದುಹೋಗದಂತೆ ಹೊಲಗಳಲ್ಲಿ ಬದುಗಳು, ಇಂಗುಗುಂಡಿ ಮತ್ತು ಕೃಷಿ ಹೊಂಡಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಬೇಕು. ಪ್ರತಿಯೊಬ್ಬ ರೈತರೂ ತಮ್ಮ ಪ್ರದೇಶದ ವಾರ್ಷಿಕ ಮಳೆಯ ಪ್ರಮಾಣವನ್ನು ತಿಳಿದುಕೊಳ್ಳಲು ಆದಷ್ಟು ಮನೆಯಂಗಳದಲ್ಲಿ/ಜಮೀನಿನಲ್ಲಿ ಮಳೆ ಮಾಪನ ಅಳವಡಿಸಿಕೊಂಡು ಮಳೆಯ ಪ್ರಮಾಣವನ್ನು ಅಳೆಯಬಹುದಾಗಿದೆ. ಸಾಮಾನ್ಯವಾಗಿ 1 ಮಿಲಿಮೀಟರ್ ಮಳೆಯು 1 ಚದರ ಮೀಟರ್ ಪ್ರದೇಶದಲ್ಲಿ 1 ಲೀಟರ್ ನೀರನ್ನು ನೀಡುತ್ತದೆ. 1 ಹೆಕ್ಟೇರ್ ಎಂದರೆ 10,000 ಚದರ ಮೀಟರ್ ಪ್ರದೇಶವಾಗಿದ್ದು, 1 ಮಿ.ಮೀ. ಮಳೆಯಾದರೆ 1 ಹೆಕ್ಟೇರ್‌ನಲ್ಲಿ 10,000 ಲೀ. ನೀರು ದೊರೆಯುತ್ತದೆ. ವಾರ್ಷಿಕ ಮಳೆ ಪ್ರಮಾಣ 1,000 ಮಿ.ಮೀ. ಇದ್ದರೆ 1 ಹೆಕ್ಟೇರ್ ಪ್ರದೇಶದಲ್ಲಿ 1 ಕೋಟಿ ಲೀ. ಮಳೆ ನೀರು ಸುರಿಯುತ್ತದೆ. ಈ ನಿಟ್ಟಿನಲ್ಲಿ ಎಷ್ಟು ನೀರನ್ನು ಇಂಗಿಸಬೇಕು ಮತ್ತು ಎಷ್ಟು ನೀರನ್ನು ಸಂಗ್ರಹಿಸಬೇಕು ಎಂಬುದನ್ನು ಯೋಜಿಸುವುದು ಉತ್ತಮ. ಹಾಗಾಗಿ ಮಳೆನೀರಿನ ಸಂಗ್ರಹಣೆ ಮತ್ತು ಇಂಗಿಸುವಿಕೆಯಿಂದ ನೀರಿನ ಕೊರತೆಯನ್ನು ಕಡಿಮೆ ಮಾಡಿ ನೀರಿನ ಸ್ವಾವಲಂಬನೆ ಸಾಧಿಸಬಹುದು.

| ಡಾ. ಪ್ರಹ್ಲಾದ್ ಪಿ. ಭಟ್ ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಸ್ತರಣೆ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

ದನ-ಎಮ್ಮೆಗಳ ಸಂಖ್ಯೆ ಕುಸಿತ

4 ವರ್ಷದಲ್ಲಿ ಕುರಿ ಮೇಕೆಗಳು ಏರಿಕೆ



ಬೆಂಗಳೂರು: ರಾಜ್ಯದಲ್ಲಿ ಕಳೆದ ನಾಲ್ಕೈದು ವರ್ಷಗಳ ಅವಧಿಯಲ್ಲಿ ಜಾನುವಾರುಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಸಾವಯವ ಕೃಷಿಯ ಜಪ ಮಾಡುತ್ತಿರುವ ಈ ಸಂದರ್ಭದಲ್ಲಿ ಈ ರೀತಿಯ ಕುಸಿತ ಕೃಷಿ ವಲಯಕ್ಕೆ ದೊಡ್ಡಪೆಟ್ಟು ಎಂದೇ ಹೇಳಬಹುದು.

ಪಶುಸಂಗೋಪನೆ ಇಲಾಖೆಯ ಮಾಹಿತಿ ಅನ್ವಯ 2019-20ರಲ್ಲಿ (20ನೇ ಗಣತಿ) 3,03,31,553 ಇದ್ದ ಪಶುಗಳ ಸಂಖ್ಯೆ 21ನೇ ಗಣತಿ ವೇಳೆಗೆ 3,01,61,706ಕ್ಕೆ ಇಳಿದಿದೆ. ಅಂದರೆ 4 ವರ್ಷಗಳಲ್ಲಿ ಕಡಿಮೆ ಆದ ಜಾನುವಾರುಗಳ ಸಂಖ್ಯೆ 1,69,847. ದನ ಹಾಗೂ ಎಮ್ಮೆಗಳ ಸಂಖ್ಯೆಯಲ್ಲಿ ದೊಡ್ಡ ಮಟ್ಟದ ಕುಸಿತ ಕಂಡಿದೆ ಎಂಬುದನ್ನು ಸರ್ಕಾರ ಕೂಡ ಒಪ್ಪಿಕೊಂಡಿದ್ದು, ಅದಕ್ಕೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿದೆ. ಇದೇ ವೇಳೆ ಜಾನುವಾರುಗಳ ಮೇವಿಗೆ ಪೂರಕವಾಗಿದ್ದ ಗೋಮಾಳಗಳು ಕಣ್ಮರೆ ಆಗುತ್ತಿರುವ ಬಗ್ಗೆ ವರದಿಯಲ್ಲಿ ಉಲ್ಲೇಖ ಮಾಡಿಲ್ಲ. ಲಭ್ಯ ಮಾಹಿತಿ ಪ್ರಕಾರ 15,27,283 ದನಗಳು ಹಾಗೂ 61,76,173 ಎಮ್ಮೆಗಳು ಕಡಿಮೆ ಆಗಿವೆ. ಈ ಪ್ರಮಾಣ ಬೆಳಗಾವಿ, ಬೆಂಗಳೂರು ನಗರ-ಗ್ರಾಮಾಂತರ, ಚಿಕ್ಕಮಗಳೂರು, ಧಾರವಾಡ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ರಾಮನಗರ, ಉತ್ತರ ಕನ್ನಡ, ಉಡುಪಿ, ವಿಜಯಪುರ ಜಿಲ್ಲೆಗಳಲ್ಲಿ ಹೆಚ್ಚಿದೆ.

ಜಾನುವಾರುಗಳ ವಿವರ

ಜಾನುವಾರು	20ನೇ ಗಣತಿ	21ನೇ ಗಣತಿ	ವ್ಯತ್ಯಾಸ
ದನ	8469004	69241721	1527283
ಎಮ್ಮೆ	2984560	2366943	617617
ಕುರಿ	11050728	12979237	1928509
ಮೇಕೆ	6169392	6333474	164082
ಹಂದಿ	323836	308298	15568
ನಾಯಿ	1288864	1216098	72766
ಇತರ	41169	15935	29234
ಒಟ್ಟು	30331553	30161706	169847

ಇಳಿಕೆಗೆ ಕಾರಣ

- ಸ್ಥಳೀಯ ತಳಿಗಳ ಬದಲಾಗಿ ಅಧಿಕ ಹಾಲು ನೀಡುವ ಮಿಶ್ರ ತಳಿಯ ಹಸುಗಳ ಸಾಕಣೆ
- ಕೃಷಿಯಲ್ಲಿ ಯಾಂತ್ರೀಕರಣ, ಟ್ರ್ಯಾಕ್ಟರ್‌ಗಳ ಬಳಕೆ
- ವಾಣಿಜ್ಯ, ತೋಟಗಾರಿಕೆ ಕೃಷಿ ಪದ್ಧತಿಗಳ ಆಳವಡಿಕೆ ಹೆಚ್ಚಳ
- ನಗರೀಕರಣ, ಕೈಗಾರೀಕರಣ, ಕಾರ್ಮಿಕರ ಕೊರತೆ
- ದೊಡ್ಡ ಪ್ರಾಣಿಗಳ ಸಾಕಣೆ ಕೈಬಿಟ್ಟು ಮಾಂಸ, ಆಹಾರಕ್ಕಾಗಿ ಕುರಿ, ಮೇಕೆ, ಕೋಳಿ ಸಾಕಣೆ

V-karnataka pg 05

ಹಾರ್ಲೆ ಹೂವುಗಳ ಅವಾಸ ಸ್ಥಾನ ಸಂರಕ್ಷಣೆಗೆ ಸೂಚನೆ



■ ವಿಕ ಸುದ್ದಿಲೋಕ ಬೆಂಗಳೂರು

ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಭಾಗದ ಕೆಲವು ಚಾರಣದ ದಾರಿಗಳಲ್ಲಿ 'ಹಾರ್ಲ್' ಹೂವುಗಳು ಅರಳಿದ್ದು, ಅವಾಸ ಸ್ಥಾನಕ್ಕೆ ಹಾನಿಯಾಗದಂತೆ ಸಂರಕ್ಷಿಸಲು ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ.

2022-23ನೇ ಸಾಲಿನಲ್ಲಿ ಕುದುರೆಮುಖದ ಕೆಲವು ಬೆಟ್ಟ ಪ್ರದೇಶಗಳಲ್ಲಿ ಈ ಹೂವುಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದ್ದರೆ, ಈ ಬಾರಿ ಸೀಮಿತ ಪ್ರಮಾಣದಲ್ಲಿ ಅರಳಿರುವುದು ಕಂಡುಬಂದಿದೆ. ನೀಲಿ ನೇರಳೆ ಬಣ್ಣದಿಂದ ಕೂಡಿರುವ ಈ ಹೂಗಳು ನೀಲಕುರಿಂಜಿ ಮಾದರಿಯಲ್ಲಿರುವೇ ಕಾಣುತ್ತಿದ್ದು, ಚಾರಣ ಪ್ರಿಯರು ಹಾಗೂ ಪ್ರವಾಸಿಗರ ವಿಶೇಷ ಗಮನ ಸೆಳೆಯುತ್ತಿವೆ. ಕುದುರೆಮುಖದ ನೈಸರ್ಗಿಕ ಸೌಂದರ್ಯಕ್ಕೆ ಹೊಸ ಆಕರ್ಷಣೆ ನೀಡುತ್ತಿರುವ ಈ ಹೂಗಳ ಅವಾಸ ಸ್ಥಾನಕ್ಕೆ ಹಾನಿಯಾಗದಂತೆ ಸಂರಕ್ಷಿಸಲು ಪ್ರವಾಸೋದ್ಯಮ ಇಲಾಖೆಯು ಚಿಕ್ಕಮಗಳೂರು ಜಿಲ್ಲೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಪರಿಸರಪ್ರೇಮಿ ಪ್ರವಾಸ ಕೈಗೊಳ್ಳಿ: ಕುದುರೆಮುಖವು ಪಶ್ಚಿಮಘಟ್ಟಗಳ ಪ್ರಮುಖ ಜೀವವೈವಿಧ್ಯ ಪ್ರದೇಶ ವಾಗಿದ್ದು, ಚಾರಣ, ಪ್ರಕೃತಿ ವೀಕ್ಷಣೆ ಹಾಗೂ ಪರಿಸರ ಪ್ರವಾಸೋದ್ಯಮಕ್ಕೆ ಪ್ರಸಿದ್ಧವಾಗಿದೆ. ಈ ಹೂವುಗಳ ಅರಳುವಿಕೆ ಪ್ರಕ್ರಿಯೆ ವಿಶಿಷ್ಟ ಪರಿಸರ ಚಕ್ರದ ಭಾಗವಾಗಿದೆ. ಈ ಹೂವುಗಳನ್ನು ವೀಕ್ಷಿಸಲು ಬರುವ ಪ್ರವಾಸಿಗರು ಅವುಗಳನ್ನು ಕೀಳದಂತೆ, ಗಿಡಗಳಿಗೆ ಹಾನಿ ಮಾಡದಂತೆ ಹಾಗೂ ಪರಿಸರದ ಸ್ವಚ್ಛತೆ ಕಾಪಾಡುವಂತೆ ಇಲಾಖೆ ಮನವಿ ಮಾಡಿದೆ.

"ಕುದುರೆಮುಖದ ಬೆಟ್ಟಗಳಲ್ಲಿ ಅರಳಿರುವ ಈ ಹೂಗಳು ಕರ್ನಾಟಕದ ಪ್ರಕೃತಿ ಸಂಪತ್ತಿನ ಅಪೂರ್ವ ಸೌಂದರ್ಯವನ್ನು ನಮಗೆ ಪರಿಚಯಿಸುತ್ತವೆ. ಇಂತಹ ನೈಸರ್ಗಿಕ ವಿಶೇಷತೆ ವೀಕ್ಷಿಸಲು ತೆರಳುವ ಸಂದರ್ಭದಲ್ಲಿ ಪರಿಸರಸ್ನೇಹಿ ಪ್ರವಾಸ ಕೈಗೊಳ್ಳಬೇಕು. ಪ್ರವಾಸಿಗರು ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುವುದರ ಜತೆಗೆ ಅದರ ಸಂರಕ್ಷಣೆಯ ಜವಾಬ್ದಾರಿಯನ್ನೂ ಅರಿತುಕೊಳ್ಳಬೇಕು," ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

ಈ ಹೂವುಗಳು ಮತ್ತು ಅವುಗಳ ಆವಾಸ ಸ್ಥಳಕ್ಕೆ ಯಾವುದೇ ಹಾನಿಯಾಗದಂತೆ ಪ್ರವಾಸಿಗರಿಗೆ ಅಗತ್ಯ ಮಾಹಿತಿ, ಮಾರ್ಗದರ್ಶನ ಮತ್ತು ಸೌಲಭ್ಯಗಳನ್ನು ಒದಗಿಸುವ ಕುರಿತು ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

- ಡಾ. ರಾಮ್ ಪ್ರಸಾತ್ ಮನೋಹರ್
ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ

ತೆಂಗು ಬೆಳೆಯುವ ರೈತರಿಗೆ ಎದುರಾಯ್ತು ಮತ್ತೊಂದು ಸಮಸ್ಯೆ

ತೆಂಗಿನ ತೋಟ ಉಳಿಸಿಕೊಳ್ಳಲು ಪರದಾಟ

▸ ಶ್ರೀಕಂಠ ಈಶ್ವರ್

• ಎಚ್.ಡಿ. ಕೋಟೆ: ಬೇಸಿಗೆ ಕಾಲಕ್ಕೂ ಮುನ್ನವೇ ತಾಲೂಕಿನಲ್ಲಿ ಬರಗಾಲ ಆವರಿಸಿದೆ. ಮುಂಗಾರು ಮಳೆ ಕೈಕೊಟ್ಟಿರುವುದರಿಂದ ಅಂತರ್ಜಲದ ಮಟ್ಟ ಪಾತಾಳಕ್ಕೆ ಕುಸಿದಿದೆ. ಇಂತಹ ಪರಿಸ್ಥಿತಿಯಲ್ಲಿ ರೈತರು ತಮ್ಮ ಆಡಿಕೆ ಹಾಗೂ ತೆಂಗಿನ ತೋಟ ಉಳಿಸಿಕೊಳ್ಳಲು ಪರಿತಪಿಸುತ್ತಿದ್ದಾರೆ. ದುರಂತ ಎಂದರೆ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತೆಂಗು ಬೆಳೆಯುವ ರೈತರಿಗೆ ಮತ್ತೊಂದು ಸಮಸ್ಯೆ ಎದುರಾಗಿದೆ. ಇಡೀ ತೆಂಗಿನ ಮರಗಳು ಕವ್ವಳೆ ಹುಳು ಕಾಟಕ್ಕೆ ತುತ್ತಾಗಿ ಒಣಗುತ್ತಿವೆ. ಇದರಿಂದ ರೈತ ವರ್ಗ ಆತಂಕದಲ್ಲಿ ಕಾಲ ಕಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ.



ತಾಲೂಕಿನ ಹಲವು ಗ್ರಾಮಗಳ ತೆಂಗಿನ ತೋಟಗಳಲ್ಲಿ ಈ ಕೀಟದ ಹಾವಳಿ ಹೆಚ್ಚುತ್ತಿದ್ದು, ಮರಗಳ ಗರಿಗಳನ್ನು ಸಂಪೂರ್ಣವಾಗಿ ನಾಶಪಡಿಸುತ್ತಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ. ಈ ಕವ್ವತಲೆ ಹುಳು ಕಾಟಕ್ಕೆ ಮೊದಲಿಗೆ ತೆಂಗಿನ ಗರಿಗಳು ಒಣಗಿ, ಮರಗಳು ಕಣ್ಣೆದುರಿಗೆ ಧರೆಗುರುಳುತ್ತಿರುವುದರಿಂದ ರೈತರು ಕಂಗೆಟ್ಟಿದ್ದಾನೆ. ಒಳ್ಳೆಯ ಫಸಲು ಕೊಡುವ ಹಂತದಲ್ಲಿದ್ದ ಮರಗಳು ಒಣಗುತ್ತಿರುವುದರಿಂದ ಅನ್ನದಾತ ತಲೆ ಮೇಲೆ ಕೈ ಹೊತ್ತು ಕೂರುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಕೆಲವುವಾರಗಳಿಂದಹಲವುತೋಟಗಳಲ್ಲಿತೆಂಗಿನಮರಗಳ ಗರಿಗಳು ಹಳದಿ ಬಣ್ಣಕ್ಕೆ ತಿರುಗಿ ಒಣಗುತ್ತಿರುವುದು ಗಮನಕ್ಕೆ ಬಂದಿದೆ. ನಂತರ ಗರಿಗಳ ಹಸಿರು ಭಾಗವನ್ನು ಸಂಪೂರ್ಣವಾಗಿ ಕೆರೆದು ತಿನ್ನುವ ಈ ಕೀಟದ ಮರಿಹುಳುಗಳಿಂದ ಮರಗಳು ಸುಟ್ಟುಹೋದಂತಿರುವ ದೃಶ್ಯ ಕಂಡುಬರುತ್ತಿದೆ. ಪರಿಣಾಮವಾಗಿ ದ್ಯುತಿಸಂಶ್ಲೇಷಣೆ ಕುಂಠಿತಗೊಂಡು ಮರಗಳ ಬೆಳವಣಿಗೆ ಕುಸಿಯುವ ಜೊತೆಗೆ ತೆಂಗಿನ ಕಾಯಿಗಳ ಸಂಖ್ಯೆ ಮತ್ತು ಗಾತ್ರದ ಮೇಲೂ ದುಷ್ಪರಿಣಾಮ ಉಂಟಾಗುವ ಸಾಧ್ಯತೆ ಇದೆ.

ತೆಂಗಿಗೆ ರೋಗ ಭಾದಿತ ರೈತರು ಇಲಾಖೆಯನ್ನು ಸಂಪರ್ಕಿಸಿದಾಗ ಇಲಾಖೆಯ ವತಿಯಿಂದ ರೈತರಿಗೆ ಸಂಪೂರ್ಣ ಸಹಕಾರದ ಜೊತೆ ಮಾರ್ಗದರ್ಶನ ನೀಡಲಾಗುವುದು, ರೋಗ ಗುಣಪಡಿಸುವರೆಗೂ ಇಲಾಖೆ ರೈತರಿಗೆ ಸಲಹೆ ನೀಡಲಿದೆ.

■ ನೇತ್ರಾವತಿ, ಸಹಾಯಕ ನಿರ್ದೇಶಕಿ, ತೋಟಗಾರಿಕೆ ಇಲಾಖೆ

Hosadiganta pg 10

ಮರಗಳು ಬೇವಿನ ಮರ ಬೇಸಿಗೆಯಲ್ಲಿ ಎಲೆ ಉದುರಿದರೆ ಹೇಗೆ ಕಾಣುತ್ತದೋ ಹಾಗೆ ತೆಂಗು ಕಾಣುತ್ತಿದೆ, ತೋಟದಲ್ಲಿರುವ ಎಲ್ಲಾ ಮರಗಳ ಸ್ಥಿತಿಯೂ ಇದೇ ಪರಿಸ್ಥಿತಿ ಇದೆ.

■ ಸೋಮಣ್ಣ, ರೈತ

ಮನುಜ ನಿನ್ನ ತೋಟದಲಿ ಜೇನಿಗೇನು ಕೆಲಸ?

ವಿವಿಧ GARDEN ಲೋಕ



ಕೀಟನಾಶಕದ ಅತಿ ಬಳಕೆಯಿಂದ ಜೇನುನೊಣಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಒಂದು ಅಂದಾಜಿನ ಪ್ರಕಾರ ಅವು ಪೂರ್ತಿ ನಾಶವಾದ ಕೆಲವೇ ವರ್ಷಗಳಲ್ಲಿ ಆಹಾರ ಉತ್ಪಾದನೆ ತೀವ್ರವಾಗಿ ಕುಸಿದು ಮನುಷ್ಯ ಸಂತತಿಯೇ ನಾಶವಾಗುವ ಸಾಧ್ಯತೆ ಇದೆಯಂತೆ! ಆದರೆ ಒಳ್ಳೆಯ ಸುದ್ದಿಯೆಂದರೆ ನಗರಗಳಲ್ಲಿ ಹೆಚ್ಚುತ್ತಿರುವ ಕೈತೋಟಗಳು ಹಾಗೂ ಅದರೊಳಗೆ ಹೆಚ್ಚುತ್ತಿರುವ ಜೇನು ಸಾಕಾಣಿಕೆ.

ದೊಡ್ಡ ತೋಟಗಳಲ್ಲಿ ಜೇನು ಸಾಕಾಣಿಕೆ ಮಾಡುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. ಒಂದು ಎಕರೆಗೆ ಇಂತಿಷ್ಟು ಎಂದು ಜೇನು ಕುಟುಂಬಗಳನ್ನು ಇಟ್ಟುಕೊಂಡರೆ ಜೇನು ಸಿಗುವುದರ ಜೊತೆಗೆ ಇಳುವರಿ ಕೂಡ ಹೆಚ್ಚುತ್ತದೆ. ಯಾವುದೇ ಬೆಳೆಯಾದರೂ ಪರಾಗಸ್ಪರ್ಶ ಮಾಡುವಲ್ಲಿ ಜೇನಿನದೇ ಮೇಲುಗೈ. ಎಷ್ಟೋ ರೈತರು ಬರಿ ಪರಾಗಸ್ಪರ್ಶ ಮಾಡುವುದಕ್ಕೆ ಅಂತಲೇ ಜೇನು ಪೆಟ್ಟಿಗೆಗಳನ್ನು ಇಡುತ್ತಾರೆ.

ನಿಮ್ಮ ಸಣ್ಣ ಕೈತೋಟದಲ್ಲಿ ಒಂದು ಪೆಟ್ಟಿಗೆ ಜೇನು ಇಟ್ಟರೂ ವರ್ಷಕ್ಕೆ ಸಾಕಾಗುವಷ್ಟು ಶುದ್ಧ ಜೇನುತುಪ್ಪ ನಿಮಗೆ ಸಿಗಬಹುದು. ಅದಕ್ಕಿಂತ ಹೆಚ್ಚಾಗಿ ಕೈತೋಟದಲ್ಲಿರುವ ಬೆಳೆಯ ಇಳುವರಿಯಲ್ಲಿ ಗಣನೀಯ ಏರಿಕೆಯಾಗು ತ್ತದೆ. ಹಣ್ಣು ತರಕಾರಿ ಗಿಡಗಳ ಜೊತೆಗೆ ಹೆಚ್ಚು ಹೂವಿನ ಗಿಡಗಳನ್ನು ಬೆಳೆಸಿದರೆ ಅವುಗಳ ಆಹಾರಕ್ಕೆ ಕೊರತೆ ಆಗುವುದಿಲ್ಲ. ಪೆಟ್ಟಿಗೆಯನ್ನು ಸ್ವಚ್ಛಗೊಳಿಸಲು ವಾರಕ್ಕೆ ಹತ್ತು ನಿಮಿಷ ವ್ಯಯಿಸಿದರೂ ಸಾಕು, ಜೇನುಗಳು ತಮ್ಮ ಕೆಲಸ ಮಾಡುತ್ತವೆ.

ಸಾಕಾಣಿಕೆಗೆ ಬಳಸುವ ತುಡುವೆ ಜೇನುಗಳು ತುಂಬಾ ಸೌಮ್ಯ ಸ್ವಭಾವದವಾಗಿರುತ್ತವೆ. ಅವುಗಳಿಗೆ ಹಾನಿ ಆಗುತ್ತದೆ ಎಂದಾಗ ಮಾತ್ರ ಅವು ಚುಚ್ಚುತ್ತವೆ. ಒಂದೋ, ಎರಡೋ ಜೇನುಗಳಿಂದ ಚುಚ್ಚಿಸಿಕೊಂಡರೂ ಅದು ಆರೋಗ್ಯಕ್ಕೆ ಒಳ್ಳೆಯದೇ! ಹಾಗೆ ಆಗಾಗ ಅವುಗಳ ವಿಷ ನಮ್ಮ ದೇಹ ಸೇರುತ್ತಿದ್ದರೆ ಮನುಷ್ಯನನ್ನು ಕಾಡುವ ಕೆಲವು ರೋಗಗಳು ಬರುವುದಿಲ್ಲವೆಂಬ ಒಂದು ನಂಬಿಕೆ ಇದೆ. ಹೀಗೆ ಜೇನುಗಳು ನಮ್ಮ ತೋಟದ ಅವಿಭಾಜ್ಯ ಅಂಗ ಆದಾಗಲೇ ನಮ್ಮ ಕೈತೋಟ ಪರಿಪೂರ್ಣವಾಗುತ್ತದೆ. ■



-ಗುರುಪ್ರಸಾದ ಕುರ್ತಕೋಟಿ

V-karnataka pg 05

Sugar retail prices stay above Rs 60/kg despite govt measures

NEW DELHI, DHNS: Sugar prices remained above Rs 60 per kg in most retail markets across India on Sunday, even after multiple Central government interventions aimed at curbing the rise, official data showed.



The all-India average retail price stood at Rs 64.24 per kg, up 1.77% from Rs 63.12 a week earlier, according to the Consumer Affairs Ministry.

Prices are now 30% higher than a month ago and 38.63% above year-ago levels. The maximum retail price touched Rs 74 per kg while the minimum was Rs 40.

City-wise rates included Rs 62 in Delhi, Rs 66 in Mumbai, Rs 63 in Chennai, and Rs 68 in Ranchi.

Wholesale prices also held firm at Rs 59.73 per kg, rising 31% month on month and matching the 38.63% year-on-year increase. A week earlier, wholesale rates were Rs 58.66 per kg.

Firm retail and wholesale levels persist despite a near-20% drop in ex-mill rates after the government allowed duty-free imports of 10 lakh tonnes of raw sugar.

Industry sources note that gaps of Rs 2-3 per kg between ex-mill and wholesale prices, and Rs 7-8 between ex-mill and retail, are typical.

Besides opening imports, the Central government has tightened stockholding norms for bulk users and dealers and earlier banned exports. It has blamed mills for "jacking up" prices while insisting stocks remain adequate.

Production for the 2025-26 season is estimated at 306 lakh tonnes, lower than earlier projections of 343 lakh tonnes, against annual demand of 280-285 lakh tonnes.

Dec Hrd Pg 06

ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ

• **ನೆಲಮಂಗಲ:** ಕೃಷಿ ಇಲಾಖೆಯ ತಾಲೂಕು ಹಾಗೂ ಜಿಲ್ಲಾ ಮಟ್ಟದ ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿ ನೀಡಲು ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ತಾಲೂಕಿನಲ್ಲಿ ಸಮಗ್ರ ಕೃಷಿ ಪದ್ಧತಿ, ಮಣ್ಣು ಹಾಗೂ ನೀರಿನ ಸಂರಕ್ಷಣೆ, ಸಾವಯವ ಹಾಗೂ ನೈಸರ್ಗಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿರುವ ರೈತರು ಹಾಗೂ ರೈತ ಮಹಿಳೆಯರು ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಸೆ.1 ರಿಂದ 15 ರವರೆಗೂ ಅವಕಾಶ ನೀಡಲಾಗಿದೆ. ಆರ್ಹತೆ ಹಾಗೂ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಲು ರೈತರು ಸಮೀಪದ ರೈತ ಸಂಪರ್ಕ ಅಥವಾ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆದುಕೊಂಡು ಅರ್ಜಿಸಲ್ಲಿಸ ಬಹುದು ಎಂದು ನೆಲಮಂಗಲ ತಾಲೂಕು ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Hosadiganta Pg 10

Hosadiganta Pg 10

ಐದು ದಿನದಲ್ಲಿ 900 ರೂ. ಹೆಚ್ಚಳ | ದ್ವಿತಳಿ ರೇಷ್ಮೆ ಬೆಳೆಗಾರರಲ್ಲಿ ಸಂತಸ

ಕೆ.ಜಿಗೆ ₹1,025 ದಾಖಲೆ ಮಾರಾಟ

• **ರಾಮನಗರ:** ಇಲ್ಲಿನ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ಶನಿ ವಾರ ದ್ವಿತಳಿ (ಬೈವೋಲ್ಟಿನ್) ಗೂಡಿನ ದರ ಕೆ.ಜಿಗೆ 1,025ಕ್ಕೆ ಮಾರಾಟ ವಾಗುವ ಮೂಲಕ ದಾಖಲೆ ಬರೆಯಿತು. ಮಿಶ್ರತಳಿ ರೇಷ್ಮೆ ಗೂಡಿಗೂ ಬಂಪರ್ ಬೆಲೆ ಬಂದಿದೆ. ಕೆ.ಜಿ.ಗೆ 806ಕ್ಕೆ ಏರಿಕೆಯಾಗಿದೆ.

ಕಳೆದ ಒಂದು ತಿಂಗಳಿಂದ ಕೆ.ಜಿಗೆ 900 ಗಡಿಯ ಆಸುಪಾಸಿನಲ್ಲಿದ್ದ ದ್ವಿತಳಿ ಗೂಡಿನ ದರ ಐದು ದಿನಗಳ ಹಿಂದೆ ಸಾವಿರದ ಸನಿಹಕ್ಕೆ ಬಂದಿತ್ತು. ಈಗ ಸಾವಿರದ ಗಡಿ ದಾಟಿದ್ದು, ರೇಷ್ಮೆ ಬೆಳೆಗಾರರ ಮೊಗದಲ್ಲಿ ನಗು ತರಿಸಿದೆ. ಮಿಶ್ರತಳಿ ಗೂಡಿನ ದರ ಸಹ ಏರುಗತಿಯಲ್ಲಿ ಸಾಗುತ್ತಾ ಬಂದಿದೆ. ಕಳೆದ ಒಂದು ತಿಂಗಳಿಂದ ಪ್ರತಿ ಕೆ.ಜಿ ಗೆ ಗರಿಷ್ಠ 600ಕ್ಕೆ ಮಾರಾಟವಾಗುತ್ತಿದ್ದ ಗೂಡು, ಮೂರು ದಿನಗಳಿಂದ 800ರ ಗಡಿ ದಾಟಿದೆ. ಈಗ ರೂ.806ಕ್ಕೆ ಮಾರಾಟವಾಗಿದೆ.

ಮಾರುಕಟ್ಟೆಗೆ ಶನಿವಾರ 301 ಬೆಳೆಗಾರರು ಗೂಡು ತಂದಿದ್ದರು. ಅದರಲ್ಲಿ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಪಾಲನಾಯಕನಕೋಟೆ ಗ್ರಾಮದ ರವಿ ತಂದಿದ್ದ 240 ಕೆ.ಜಿಗೆ ದ್ವಿತಳಿ ಗೂಡನ್ನು ರೀಲರ್ ನಾಸಿರುದ್ದೀನ್ ಅವರು ಪ್ರತಿ ಕೆ.ಜಿ.ಗೆ 1,025ರಂತೆ ಖರೀದಿ ಮಾಡಿದರು ಎಂದು ರಾಮನಗರ ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆ ಉಪನಿರ್ದೇಶಕ ಕೈಲಾಸ ಮೂರ್ತಿ ಮಾಹಿತಿ ನೀಡಿದರು. ಬೆಳೆಗಾರ ರವಿ ತಂದಿದ್ದ ಗುಣಮಟ್ಟದ ಗೂಡನ್ನು ರೀಲರ್‌ಗಳು ಖರೀದಿಸಲು ಮುಗಿಬಿದ್ದರು. ಅತಿ ಹೆಚ್ಚು ದರ ಪಡೆದ ರವಿ ಅವರನ್ನು ಮಾರುಕಟ್ಟೆ ಮತಿಯಿಂದ ಸನ್ಮಾನಿಸಿ ಅಭಿನಂದನಾ ಪತ್ರ ಸಹ ನೀಡಲಾಯಿತು ಎಂದರು. ಬರದ



ಕಾರಣಕ್ಕೆ ಮಾರುಕಟ್ಟೆಗೆ ಬರುವ ರೇಷ್ಮೆಗೂಡಿನ ಆವಕದ ಪ್ರಮಾಣ ಕಡಿಮೆಯಾಗಿದೆ. ಬೆಳೆಗಾರರು ತರುವ ದ್ವಿತಳಿ ಮತ್ತು ಮಿಶ್ರತಳಿ ಗೂಡಿಗೆ ಬಂಪರ್ ಬೆಲೆ ಸಿಗುತ್ತಿದೆ. ತೋಟದಲ್ಲಿ ಹಿಪ್ಪುನೇರಳೆ ಸೊಪ್ಪಿನ ಇಳುವರಿ ಕುಂಠಿತವಾಗಿದೆ. ಆಲ್ಲದೆ, ಸದಾ ಹಸಿರಾಗಿರುವ ಹಿಪ್ಪುನೇರಳೆ ಗಿಡಕ್ಕೆ ರೋಗಬಾಧೆ ಕಾಡುತ್ತಿದೆ. ಇದರಿಂದಾಗಿ ರೇಷ್ಮೆ ಗೂಡಿನ ಉತ್ಪಾದನೆ ಕಡಿಮೆಯಾಗಿದ್ದು, ಬೇಡಿಕೆ ಹೆಚ್ಚಾಗಿದೆ ಎಂದು ರೇಷ್ಮೆ ಗೂಡು ಮಾರುಕಟ್ಟೆ ಅಧಿಕಾರಿಗಳು ತಿಳಿಸಿದರು.

ದ್ವಿತಳಿ ರೇಷ್ಮೆ ಗೂಡಿಗೆ ಉತ್ತಮ ಧಾರಣೆ ಸಿಗುತ್ತಿರುವುದರಿಂದ ಬೆಳೆಗಾರರು, ಮಿಶ್ರತಳಿಗಿಂತ ಹೆಚ್ಚಾಗಿ ದ್ವಿತಳಿಯತ್ತ ಚಿತ್ತ ಹರಿಸಿದ್ದಾರೆ. ದೇಶೀಯ ಸೀರೆ ಮತ್ತಿತರ ಸಿದ್ದ ಉಡುಪಿನಲ್ಲಿ ದ್ವಿತಳಿ ರೇಷ್ಮೆ ಹೆಚ್ಚಾಗಿ ಬಳಕೆಯಾಗುವುದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿದೆ ಎಂದರು.

- ಸಾವಿರದ ದಾಟಿದ ದರದಿಂದ ರೇಷ್ಮೆ ಬೆಳೆಗಾರರ ನಗು
- ತಿಂಗಳಿಂದ ಪ್ರತಿ ಕೆ.ಜಿಗೆ ಗರಿಷ್ಠ 600ಕ್ಕೆ ಮಾರಾಟ
- 3 ದಿನದಿಂದ 800ರ ಗಡಿ ದಾಟಿದೆ. ಈಗ ರೂ. 806
- 301 ಬೆಳೆಗಾರರಿಂದ ಮಾರುಕಟ್ಟೆಗೆ ರೇಷ್ಮೆ ಗೂಡು
- ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಪಾಲನಾಯಕನಕೋಟೆ ಗ್ರಾಮದ ರವಿ ತಂದಿದ್ದ 240 ಕೆ.ಜಿಗೆ ದ್ವಿತಳಿ ಗೂಡನ್ನು ರೀಲರ್ ನಾಸಿರುದ್ದೀನ್ ಅವರು ಪ್ರತಿ ಕೆ.ಜಿ.ಗೆ 1,025ರಂತೆ ಖರೀದಿ ಮಾಡಿದ್ದಾರೆ.

ಸೊಪ್ಪಿನ ಇಳುವರಿ ಕುಂಠಿತ

ದ್ವಿತಳಿ ಮತ್ತು ಮಿಶ್ರತಳಿ ಗೂಡಿಗೆ ಬಂಪರ್ ಬೆಲೆ ಸಿಗುತ್ತಿದೆ. ತೋಟದಲ್ಲಿ ಹಿಪ್ಪುನೇರಳೆ ಸೊಪ್ಪಿನ ಇಳುವರಿ ಕುಂಠಿತವಾಗಿದೆ. ಸದಾ ವ ಹಿಪ್ಪುನೇರಳೆ ಗಿಡಕ್ಕೆ ರೋಗಬಾಧೆ ಕಾಡುತ್ತಿದೆ. ಇದರಿಂದಾಗಿ ರೇಷ್ಮೆ ಗೂಡಿನ ಉತ್ಪಾದನೆ ಕಡಿಮೆಯಾಗಿದೆ. ಈಗ ಮಾರುಕಟ್ಟೆಯಲ್ಲಿ ದರ ಹೆಚ್ಚಾಗಿದೆ. ಬೇಡಿಕೆ ಹೆಚ್ಚಾಗಿದೆ ಎಂದು ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆ, ಉಪನಿರ್ದೇಶಕ ಕೈಲಾಸ ಮೂರ್ತಿ ತಿಳಿಸಿದರು.

ಆಹಾರ ಸಂರಕ್ಷಣೆ ಎಂಬ ಗ್ರಾಮೀಣ ಕಲೆ

ನಮ್ಮ ಹಿರಿಯರು ಆ ಕಾಲದಲ್ಲಿ ಆಹಾರ ಪದಾರ್ಥಗಳ ಸಂರಕ್ಷಣೆಗೆ ಬಳಸುತ್ತಿದ್ದ ಅಡಕಲು ಗಡಿಗೆ, ನೆಲವು, ಹಗೇವು ಇತ್ಯಾದಿಯ ಬಳಕೆ ಈಗಲೂ ಕೆಲವೆಡೆ ರೂಢಿಯಲ್ಲಿದೆ. ವರ್ಷಾನುಗಟ್ಟಲೆ ಆಹಾರಗಳನ್ನು ಕೆಡದಂತೆ ಕಾಪಿಡುವ ಇವುಗಳ ದೇಸಿ ತಂತ್ರಜ್ಞಾನಕ್ಕೆ ಈಗಿನವರೂ ತಲೆದೂಗುತ್ತಾರೆ.

ಕೋಭಾ ದೇಸಾಯಿ
feedbacklvk@vijaykarnataka.com



ತರಕಾರಿ, ಹಾಲು ಹಾಗೂ ಅದರ ಉತ್ಪನ್ನಗಳನ್ನು ಸಂರಕ್ಷಿಸಿಡಲು ಈಗಿನ ಆಧುನಿಕ ಕಾಲದಲ್ಲಿ ಗೋದಾಮು, ಶೀತಲೀಕರಣ ಮಳಿಗೆಗಳಿವೆ. ಆದರೆ ಈ ಆಹಾರದ ಸಂಗ್ರಹಣೆ ಹಾಗೂ ಸಂರಕ್ಷಣೆಯನ್ನು ನಮ್ಮ ಪೂರ್ವಜರು ಮೊದಲಿನಿಂದಲೂ ಮಾಡುತ್ತಲೇ ಬಂದಿದ್ದಾರೆ. ಫ್ರಿಜ್ ಇರದ ಕಾಲದಲ್ಲಿಯೂ ಯಾವುದೇ ರಾಸಾಯನಿಕ ಬಳಸದೆ ಯೋಗ್ಯ ರೀತಿಯಲ್ಲಿ ಕಾಳು, ತರಕಾರಿ, ಬೀಜ ಮುಂತಾದವನ್ನು ಸಂಗ್ರಹಿಸಿಡುವ ಕಲೆ ಅವರಿಗೆ ತಿಳಿದಿತ್ತು.

ಅಡಕಲು ಗಡಿಗೆ

ಆಗಿನವರು ನಿತ್ಯದ ಬಳಕೆಗೆ ಅವಶ್ಯವಿರುವ, ವರ್ಷಾನುಗಟ್ಟಲೆ ಬೇಕಾಗುವ ಕಾಳುಕಡಿಗಳನ್ನು ಸಂಗ್ರಹಿಸಿಡಲು ಮಣ್ಣಿನ ಮಡಕೆಗಳನ್ನು ಉಪಯೋಗಿಸುತ್ತಿದ್ದರು. ಸುಮಾರು 25, 30 ಕೆ.ಜಿಯಿಂದ ನಾಲ್ಕೈದು ಕೆ.ಜಿಯವರೆಗೂ ಹಿಡಿಸುವಷ್ಟು ಮಡಕೆಗಳ ಸಂಗ್ರಹ ಮಾಡಿಕೊಂಡಿರುತ್ತಿದ್ದರು. ಅವುಗಳಲ್ಲಿ ಕಾಳುಗಳನ್ನು



ಅಡಕಲು ಗಡಿಗೆ

ಸಂಗ್ರಹಿಸಿ, ಮುಚ್ಚಳ ಮುಚ್ಚಿದ ಅದರ ಬಾಯಿಗೆ ಗಾಳಿಯಾಡದಂತೆ ಬಟ್ಟೆ ಕಟ್ಟಿ ಬೆಚ್ಚಗಿನ ಕೋಣೆಯಲ್ಲಿ ಮರದ ಹಲಗೆಯ ಮೇಲೆ ಒಂದರ ಮೇಲೊಂದರಂತೆ ಜೋಡಿಸಿಡುತ್ತಿದ್ದರು. ಇವುಗಳ ಸಂಗ್ರಹಕ್ಕೆ ಅಡಕಲು ಗಡಿಗೆ ಎಂದೇ ಕರೆಯಲಾಗುತ್ತಿತ್ತು.

ವರ್ಷಪೂರ್ತಿ ಬಾಳಿಕೆ

ಕಾಳುಗಳ ತೇವಾಂಶ ಹೋಗುವಂತೆ ಅವುಗಳನ್ನು ಚೆನ್ನಾಗಿ ಒಣಗಿಸಿ ಬೇವಿನ ಸೊಪ್ಪು ಅಥವಾ ಹರಳೆಣ್ಣೆ ಹಾಗೂ ಅರಿಶಿಣದ ಮಿಶ್ರಣವನ್ನು ಸವರಿಟ್ಟು ವರ್ಷ ಪೂರ್ತಿ ಅವುಗಳನ್ನು ಉಪಯೋಗಿಸುತ್ತಿದ್ದರು. ಕೇವಲ ಕಾಳುಗಳಷ್ಟೇ ಅಲ್ಲ ಬೀಸಿಗೆಯಲ್ಲಿ ಮಾಡಿಟ್ಟುಕೊಂಡ ಶ್ಯಾವಿಗೆ, ಸೌತೆಬೀಜ, ಗೌಲಿ, ಕೆಂಡಿಗೆ, ಹಪ್ಪಳ, ಬಾಳಕದಂಥ ವಿಶೇಷ ಪದಾರ್ಥಗಳ ಸಂಗ್ರಹಕ್ಕೆ ಅಡಕಲು ಮಡಕೆಗಳು ಅತ್ಯಂತ ಸೂಕ್ತ ಎಂದು ಅವರು ಮನಗಂಡಿದ್ದರು. ಅಷ್ಟೇ ಅಲ್ಲದೆ ಸೊಪ್ಪು, ಮಾವಿನಕಾಯಿ ಹೋಳುಗಳನ್ನು ನೀರಿನಂಶ ಹೋಗುವಂತೆ ಒಣಗಿಸಿ ಮಡಕೆಯಲ್ಲಿ ತುಂಬಿಟ್ಟು ಬೇಕಾದಾಗ ಉಪಯೋಗಿಸುತ್ತಿದ್ದರು. ಈರುಳ್ಳಿ, ಬೆಳ್ಳುಳ್ಳಿಯನ್ನು ನೆಲಕ್ಕೆ ತಾಕದಂತೆ ಗಾಳಿ ತಾಕುವಂತಹ ಸ್ಥಳದಲ್ಲಿ ಕೋಲಿಗೆ ತೂಗು ಹಾಕುತ್ತಿದ್ದರು. ಕುಂಬಳಕಾಯಿ, ಮಂಗಳೂರು ಸೌತೆಯಂಥ ತರಕಾರಿಗಳನ್ನು ನೆಲಕ್ಕೆ ತಾಕದಂತೆ ಮರದ ಹಲಗೆ ಮೇಲೆ ಇಡುತ್ತಿದ್ದರು.

ದೇಸಿ ಸೊಗಡು

ಸಂದೂಕ ಮತ್ತು ನೆಲುವು

ಮೆಣಸಿನಕಾಯಿ, ಬೆಲ್ಲ, ಬೆಣ್ಣೆ ತುಪ್ಪ, ಸಿಹಿ ತಿಂಡಿಯಂತಹ ಪದಾರ್ಥಗಳಿಗೆ ಸಂದೂಕ ಅಂದರೆ ಗಾಳಿಯಾಡದ ಒಂದೇ ಮುಚ್ಚಳವಿರುವ ಮರದ ದೊಡ್ಡ ಪೆಟ್ಟಿಗೆ ಬಳಸುತ್ತಿದ್ದರು. ಇನ್ನು ಹಾಲಿನ ಉತ್ಪನ್ನಗಳಾದ ನಿತ್ಯದ ಬಳಕೆಗೆ ಬೇಕಾಗುವ ಹಾಲು, ಮೊಸರು, ಬೆಣ್ಣೆ ತುಪ್ಪವನ್ನು ಮನೆಯಲ್ಲಿರುವ ಬೆಕ್ಕು, ನಾಯಿಯಿಂದ ರಕ್ಷಿಸಿಡಲು ನೆಲುವು ಅಂದರೆ ನಾರಿನಿಂದ ಮಾಡಿದ ಜೋತಾಡುವ ಬುಟ್ಟಿಯನ್ನು ಮನೆಯ ಜಂತಿಗೆ ತೂಗಾಡುವಂತೆ ಕಟ್ಟಿ ಅದರಲ್ಲಿ ಹಾಲಿನ ಉತ್ಪನ್ನಗಳನ್ನಿಡುತ್ತಿದ್ದರು. ಹೀಗೆ ದವಸ ಧಾನ್ಯಗಳ ಸಂಗ್ರಹಣೆಯ ವಿಧಾನಗಳು ಬದಲಾಗುತ್ತಿದ್ದರೂ, ಇನ್ನೂ ಅನೇಕ ಹಳ್ಳಿಯ



ಕಾಳು ಸಂಗ್ರಹಣೆಗೆ ಹಗೇವು

ಹಳ್ಳಿಗಳಲ್ಲಿ ವರ್ಷಕ್ಕೆ ಬೇಕಾಗುವ ಮುಖ್ಯ ಕಾಳುಗಳನ್ನು ಗೋಣಿ ಚೀಲದಲ್ಲಿ ಸಂಗ್ರಹಿಸಿದರೆ, ಕ್ವಿಂಟಲ್‌ಗಟ್ಟಲೆ ಇರುವ ಕಾಳುಗಳನ್ನು ಹಗೇವು ಅಂದರೆ ನೆಲದೊಳಗಿನ ಕೋಣೆ/ನೆಲಮಾಳಿಗೆಯಂಥ ಬಯಲು ಜಾಗದಲ್ಲಿ ಬಾಗಿಲು ಇರದ ಹಗೇವು ಮೇಲೆ ಹಾಸು ಕಲ್ಲನ್ನಿಟ್ಟು ನೆಲದ ಸಮದಟ್ಟಾಗಿ ಮೂರ್ನಾಲ್ಕು ಅಡಿ ಮಣ್ಣು ಹಾಕಿ ಮುಚ್ಚಿ ಕಾಳುಗಳನ್ನು ಸಂಗ್ರಹಿಸಲಾಗುತ್ತಿತ್ತು. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಇಂದಿಗೂ ಇವುಗಳನ್ನು ಉಪಯೋಗಿಸುತ್ತಾರೆ.



ನೆಲುವು

ಮನೆಗಳಲ್ಲಿ ಇಂತಹ ಪುರಾತನ ಆಹಾರ ಸಂರಕ್ಷಣೆ ಪದ್ಧತಿಗಳು ಅಲ್ಲಲ್ಲಿ ಚಾಲ್ತಿಯಲ್ಲಿವೆ. ನಮ್ಮ ಪೂರ್ವಿಕರು ಅನುಸರಿಸಿಕೊಂಡು ಬಂದ ಇಂತಹ ವಿಧಾನಗಳಿಂದ ನಾವು ಇಂದಿಗೂ ಅನೇಕ ಸಸ್ಯದ ಬೀಜಗಳನ್ನು, ಕಾಳುಕಡಿಗಳನ್ನು ಉಪಯೋಗಿಸುತ್ತಿದ್ದೇವೆ.■

V-karnataka pg 08



Flower power: Rare blue-violet flowers add charm to Kudremukh trekking trails, in the Western Ghats.
SPECIAL ARRANGEMENT

Hindu Pg 04

Trails of Kudremukh Hills come alive with Neelakurinji-like bloom

The Hindu Bureau
BENGALURU

Adding a distinctive charm to the beauty of the Western Ghats, a rare blue-violet flower resembling Neelakurinji has bloomed big along some trekking trails in the Kudremukh region of Chikkamagaluru, attracting more trekkers and nature enthusiasts.

According to the Forest and Tourism Department officials, these flowers were seen in greater abundance in some of the hill regions of Kudremukh during 2022-23, earlier. They have appeared in limited numbers again this time. The blue-violet blooms scattered across the green hills are adding a unique attraction to the natural landscape of Kudremukh.

Sampath, owner of Namma Mane homestay near Kalasa in Chikkamagaluru, said that the bloom in 2022-23 had attracted big crowds to the region and they were expecting a similar jump in tourist traffic this season too.

Ram Prasath Manohar, Secretary, Tourism Department, said that the limited blooming of these blue-violet flowers in Kudremukh this year has generated special interest among trekking enthusiasts and nature tourists. "There is a need to present such natural phenomena through environmentally responsible tourism. Instructions have been given to the district Tourism Department officials to provide visitors with the necessary information, guidance and facilities without causing any harm to the flowers or their habitat," he said.

He urged the visitors not to pluck the flowers and only watch them. "If they are plucked, then it disturbs the blooming cycle of these flowers. We have requested visitors not to damage the plants or litter the surroundings and help us preserve the natural environment," Mr. Manohar said.

Tourism Minister K.J. George said blue-violet flowers like neelakurinji blooming in the hills of Kudremukh showcase the exceptional beauty of Karnataka's natural wealth. "While visiting such attractions, tourists must adopt eco-friendly travel practices. Visitors should not only enjoy the beauty of nature but also understand their responsibility towards protecting it."